ಸಿ.ಡಬ್ಲ್ಯೂ.–01

**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಪಿ.ಸಿ.ಆರ್. ನಂ. 65/2025**

| | | |
|---|---|---|
| ಸಾಕ್ಷಿದಾರರ ಹೆಸರು | : | ವೆಂಕಟೇಶ್ |
| ತಂದೆಯ ಹೆಸರು | : | ಶೇಷಗಿರಿರಾವ್ |
| ವಯಸ್ಸು | : | 76 ವರ್ಷ |
| ಉದ್ಯೋಗ | : | ನಿವೃತ್ತ ಖಾಸಗಿ ನೌಕರ |
| ವಾಸಸ್ಥಳ | : | ಮೈಸೂರು. |

**ಸಾಕ್ಷಿಯನ್ನು ದಿನಾಂಕಃ 04.06.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 223 ರಡಿಯಲ್ಲಿ ಪಿರ್ಯಾದುದಾರನ ಪ್ರಮಾಣ ಪೂರ್ವ ಹೇಳಿಕೆ**

ನಾನು ಹೆಚ್.ಡಿ. ಕೋಟೆಯ, ಹೆಚ್. ಮಟಕೆರೆ ಗ್ರಾಮದ ಮೂಲ ವಾಸಿಯಾಗಿರುತ್ತೇನೆ. ಸದರಿ ಗ್ರಾಮದಲ್ಲಿ ನನಗೆ ಸ.ನಂ. 56/2 ರಲ್ಲಿ 01 ಎಕರೆ 06 ಗುಂಟೆ ವಿಸ್ತೀರ್ಣದ ಪಿತ್ರಾರ್ಜಿತ ಆಸ್ತಿ ಇರುತ್ತದೆ. ಸದರಿ ಆಸ್ತಿಯು ನನ್ನ ಅಜ್ಜನಿಂದ ನನ್ನ ತಂದೆಗೆ ಬಂದು ನಂತರ ನನ್ನ ತಂದೆಗೆ ನಾನು ಒಬ್ಬನೇ ಮಗನಾದ್ದರಿಂದ ನನಗೆ ವರ್ಗಾವಣೆಯಾಗಿರುತ್ತದೆ. ಸದರಿ ಆಸ್ತಿಗೆ ಸಂಬಂಧಿಸಿದ ಎಲ್ಲಾ ಕಂದಾಯ ದಾಖಲೆಗಳು ನನ್ನ ಹೆಸರಿನಲ್ಲಿಯೇ ಇದ್ದು, ನಾನು ಅದರ ಸ್ವಾಧೀನಾನುಭವದಲ್ಲಿರುತ್ತೇನೆ. ಸದರಿ ಗ್ರಾಮದಲ್ಲಿ ನನಗೆ ಯಾರು ಸಂಬಂಧಿಗಳು ಇಲ್ಲದೇ ಇರುವುದರಿಂದ ಸದರಿ ಗ್ರಾಮದ ಕೆಂಪೇಗೌಡರ ಮಗ ಕೃಷ್ಣೇಗೌಡ ಎಂಬುವರಲ್ಲಿ ನನ್ನ ಆಸ್ತಿಯನ್ನು ನೋಡಿಕೊಳ್ಳುವಂತೆ ಉಸ್ತುವಾರಿ ವಹಿಸಿರುತ್ತೇನೆ. ನನಗೆ ವಯಸ್ಸಾದ ಕಾರಣ ಸದರಿ ಆಸ್ತಿಗೆ ಪದೇ-ಪದೇ ಬರಲು ಆಗುತ್ತಿರಲಿಲ್ಲ ಹಾಗು ಆ ಕಾರಣಕ್ಕಾಗಿ ನಾನು ಸುಮಾರು 06 ತಿಂಗಳಿಗೊಮ್ಮೆ

ಬಂದು ಹೋಗುವುದು ಮಾಡುತ್ತಿದ್ದೆ. ಆಸ್ತಿಗೆ ಸಂಬಂಧಿಸಿದಂತೆ ಏನಾದರೂ ವಿಚಾರಗಳಿದ್ದಲ್ಲಿ ಕೃಷ್ಣೇಗೌಡರೇ ನನಗೆ ತಿಳಿಸುತ್ತಿದ್ದರು. ಆ ಪ್ರಕಾರ ನಾನು ಅಲ್ಲಿಗೆ ಹೋಗುತ್ತಿದ್ದೆ. ಸದರಿ ಆಸ್ತಿಯು ಮೈಸೂರು–ಮಾನಂದವಾಡಿ ಮುಖ್ಯ ರಸ್ತೆಗೆ ಹೊಂದಿಕೊಂಡು ಊರಿನ ಗೇಟ್ ನ ಬಳಿ ಇದ್ದುದರಿಂದ, ಅದು ತುಂಬಾ ಬೆಲೆ ಇರುವ ಆಸ್ತಿ ಆಗಿರುತ್ತದೆ. ಹೀಗಿರುವಾಗ ದಿನಾಂಕಃ 23.10.2024 ರಂದು ಈ ಪಿರ್ಯಾದಿಯು ತಿಳಿಸಿರುವ ಆರೋಪಿಗಳು ನನ್ನ ಆಸ್ತಿಯ ಪಕ್ಕದ ಸ.ನಂ. 56/1ರ ಮಾಲೀಕರಾದ ಶಿವಣ್ಣ ಹಾಗು ಗಣೇಶ ನಾಯಕರವರೊಂದಿಗೆ ಶಾಮೀಲಾಗಿ ನನ್ನ ಆಸ್ತಿಯನ್ನು ಲಪಟಾಯಿಸುವ ಮೂಲ ಉದ್ದೇಶದಿಂದ ಊರಿನ ಸುಮಾರು 50–60 ಜನರೊಂದಿಗೆ ಸೇರಿಕೊಂಡು ನನ್ನ ಆಸ್ತಿಗೆ ಅವರು ಅತಿಕ್ರಮ ಪ್ರವೇಶ ಮಾಡಿ ಆಸ್ತಿಯಲ್ಲಿ ಅಂಬೇಡ್ಕರ್ ಗ್ರಾಮೀಣಾಭಿವೃದ್ಧಿ ಸಮಿತಿಯ ನಾಮಫಲಕ ಅಳವಡಿಸಿ ಸುತ್ತಲೂ ಕಲ್ಲು ಕಂಬದ ತಂತಿ ಬೇಲಿ ಹಾಕಿರುತ್ತಾರೆ. ನಂತರ ವಿಷಯ ತಿಳಿದು ನಾನು ಹಾಗು ನನ್ನ ಮಗ ಅಲ್ಲಿಗೆ ಹೋಗಿದ್ದು, ಆದರೆ ಅಲ್ಲಿ ಸೇರಿದ ಜನರನ್ನು ನೋಡಿ ನಮಗೆ ಭಯವಾಗಿ ನಾವು ಯಾವ ಮಾತನಾಡದೇ ಅಲ್ಲಿಂದ ಹೊರಟು ನೇರವಾಗಿ ಅದೇ ದಿನ ಹೆಚ್.ಡಿ. ಕೋಟೆ ಪೋಲೀಸ್ ಠಾಣೆಗೆ ಬಂದು ನನ್ನ ಆಸ್ತಿಗೆ ಸಂಬಂಧಿದ ಎಲ್ಲಾ ದಾಖಲೆಗಳ ಪ್ರತಿಗಳೊಂದಿಗೆ ಪೋಲೀಸರಿಗೆ ದೂರನ್ನು ನೀಡಿರುತ್ತೇನೆ. ಪೋಲೀಸರು ಈ ಸಂಬಂಧ ನಮ್ಮಲ್ಲಿ ಸ್ಥಳಕ್ಕೆ ಹೋಗಿ ಪರಿಶೀಲಿಸಿ, ಆರೋಪಿಗಳನ್ನು ವಿಚಾರಿಸಿ, ಈ ಬಗ್ಗೆ ನಮಗೆ ತಿಳಿಸುವುದಾಗಿ ಹೇಳಿ ಮರುದಿನ ಬರುವಂತೆ ತಿಳಿಸಿರುತ್ತಾರೆ. ಆದರೆ ನಂತರ ಪೋಲೀಸರು ಯಾವುದೇ ರೀತಿಯ ಕಾನೂನು ಕ್ರಮ ಕೈಗೊಂಡಿರುವುದಿಲ್ಲ. ಮರುದಿನ ಅಂದರೆ ದಿನಾಂಕಃ 24.10.2024 ರಂದು ಪೋಲೀಸರು ಇದು ಸಿವಿಲ್ ಸ್ವರೂಪದ ವಿಚಾರವಾಗಿದ್ದು, ನ್ಯಾಯಾಲಯಕ್ಕೆ ಹೋಗಿ ಸಮಸ್ಯೆ ಬಗೆಹರಿಸಿಕೊಳ್ಳುವಂತೆ ಸ್ವೀಕೃತಿ ನೀಡಿ ತಹಶೀಲ್ದಾರ್ ರವರಿಗೆ ಈ ಬಗ್ಗೆ ಸರ್ವೆ

ಮಾಡಿಸಲು ಸೂಚಿಸುತ್ತೇವೆಂದು ನಮ್ಮಲ್ಲಿ ತಿಳಿಸಿರುತ್ತಾರೆ. ಆರೋಪಿಗಳು ಗ್ರಾಮದಲ್ಲಿ ರಾಜಕೀಯವಾಗಿ ತುಂಬಾ ಪ್ರಭಾವಿ ವ್ಯಕ್ತಿಗಳಾದ್ದರಿಂದ ಸರ್ವೆ ಇಲಾಖೆಯವರು ಸಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ನಂತರ ದಿನಾಂಕಃ 28.10.2024 ರಂದು ಈ ಬಗ್ಗೆ ಎಸ್.ಪಿ., ಮೈಸೂರುರವರಿಗೆ ದೂರನ್ನು ನೀಡಿರುತ್ತೇನೆ. ಆದರೆ ಅವರೂ ಸಹ ಆರೋಪಿಗಳ ವಿರುದ್ಧ ಯಾವುದೇ ಕಾನೂನು ಕ್ರಮ ಜರುಗಿಸಿರುವುದಿಲ್ಲವಾದ ಕಾರಣ ನಾನು ನ್ಯಾಯಾಲಯಕ್ಕೆ ಈ ಖಾಸಗಿ ದೂರನ್ನು ಸಲ್ಲಿಸಿರುತ್ತೇನೆ. ನನ್ನ ಖಾಸಗಿ ದೂರಿನ ಜೊತೆಗೆ ನಾನು ಕೆಲವು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಹೆಚ್.ಡಿ. ಕೋಟೆ ಪೋಲೀಸರಿಗೆ ನೀಡಿದ ದೂರಿನ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು **ನಿ.ಪಿ.-1** ಎಂದು, ಪೋಲೀಸರು ನೀಡಿದ ಸ್ವೀಕೃತಿಯನ್ನು ಹಾಜರುಪಡಿಸಿದ್ದು, ಅದನ್ನು **ನಿ.ಪಿ.-2** ಎಂದು, ಮೈಸೂರು ಜಿಲ್ಲಾ ಎಸ್.ಪಿ. ಯವರಿಗೆ ನೀಡಿದ ದೂರಿನ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು **ನಿ.ಪಿ.-3** ಎಂದು, ಭೂ ಮಾಪನಾ ಇಲಾಖೆಯವರಿಗೆ ನೀಡಿದ ಮನವಿ ಪತ್ರದ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು **ನಿ.ಪಿ.-4** ಎಂದು, ನನ್ನ ಸ.ನಂ. 56/2 ಆಸ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಅದನ್ನು **ನಿ.ಪಿ.-5** ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಪಿರ್ಯಾದಿ ಪರ ವಕೀಲರು ಮುಂದುವರೆದ ಹೇಳಿಕೆ / ದಾಖಲೆಗಳನ್ನು ಗುರುತಿಸಲು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**